


ಕಲೆ: ವೆಂಕಟ್ರಮಣ ಭಟ್

# ನಿನ್ನೊಡನೆ ಇರಲೆಂದು...

ನೀ ಮಡಚಿಟ್ಟ ನಿನ್ನ ಸೀರೆಯ
ಮಡಿಕೆಗಳಲಿ ಸೇರಿದ್ದೆ
ಉಡುವ ಮೊದಲು ನೀ ಒದರಿದೆ
ಸೀರೆಯ... ನಾ ಉದುರಿದೆ.

ನಿನ್ನ ಉದ್ದನೆಯ
ಜಡೆಯಲಿ ಸೇರಿದೆ
ಕುರುಳಿನೊಡನೆ ಆಡಲು...
ಬಾಚಿ ನನ್ನ ನೀ ಬೀಳಿಸಿದೆ.

ಆದಕೇ ಈಗ ಸೇರಿದ್ದೇನೆ
ನಿನ್ನ ಉಸಿರಾಟದೊಡನೆ
ಇರುವೆ ಇಲ್ಲೇ ನೀನಿರುವವರೆಗೆ
ಅಥವಾ...
ನಾನಿರುವವರೆಗೆ.

● ತಲಕಾಡು ಶ್ರೀನಿಧಿ